**ದಿನಾಂಕಃ 20.09.2024 ರಂದು ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಪಿ.ಎಮ್.ವಿ ವಕೀಲರಿಂದಃ**

ಪ್ರತಿವಾದಿ ಅಂಬಾದಾಸ ಪಡತಾರೆ ಅವರ ಹೆಂಡತಿ ಎಂದರೆ ಸರಿ. ಪ್ರತಿವಾದಿ ಮತ್ತು ಅವರ ಗಂಡನಾದ ಅಂಬಾದಾಸ ರವರ ನಡುವೆ ಅವರ ವೈವಾಹಿಕ ಜೀವನದ ಬಗ್ಗೆ ನ್ಯಾಯಾಲಯದಲ್ಲಿ ನ್ಯಾಯ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಜೀವನಾಂಶ ಕೇಳಿ ತನ್ನ ಗಂಡನಾದ ಅಂಬಾದಾಸನ ವಿರುದ್ದ ಅ.ದಾ.ನಂ.380/1993 ನೇದ್ದನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನ್ಯಾಯಾಲಯವು ಅಂಬಾದಾಸರವರು ಪ್ರತಿವಾದಿಗೆ ತಿಂಗಳಿಗೆ 3000/- ಗಳನ್ನು ಜೀವನಾಂಶ ಕೊಡಬೇಕು

ಮತ್ತು ಈ ದಾವೆಯ ದಾವಾ ಆಸ್ತಿಯ ಮೇಲೆ ಚಾರ್ಜನ್ನು (Charge) ಹೋರೆಸಿತ್ತು ಎಂದರೆ ನನಗೆ ಗೊತ್ತಿಲ್ಲ. ಅಂಬಾದಾಸ ಇವರು ಅ.ದಾ.ನಂ.380/1993 ನೇದ್ದರಲ್ಲಿ ಆದ ಆದೇಶದ ಪ್ರಕಾರ ಜೀವನಾಂಶವನ್ನು ಪ್ರತಿವಾದಿಗೆ ಕೊಡದೆ ಇದ್ದುದ್ದರಿಂದ ಪ್ರತಿವಾದಿ ಅಂಬಾದಾಸ ರವರ ವಿರುದ್ದ ಇ.ಪಿ ನಂ.9/2010 ನೇದ್ದನ್ನು ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಇ.ಪಿ ಯಲ್ಲಿ ದಿನಹಾಂಕ 04.06.2010 ರಂದು ನ್ಯಾಯಾಲಯವು ಸದರಿ ಇಪಿ ಮುಕ್ತಾಯವಾಗುವವರೆಗೂ ಅಂಬಾದಾಸರವರು ಈ ದಾವೆಯ ದಾವಾ ಆಸ್ತಿಯನ್ನು ಯಾರಿಗೂ ಮಾರಾಟ ಮಾಡಬಾರದು ಮತ್ತು ಅದರ ಮೇಲೆ ಯಾವುದೇ ತರಹದ ಬೋಜಾ ಮಾಡಬಾರದು ಎಂದು ಆದೇಶ ಮಾಡಿತ್ತು ಎಂದರೆ ನನಗೆ ಗೊತ್ತಿಲ್ಲ.

ಅಂಬಾದಾಸರ ವರು ತನ್ನ ಹೆಂಡತಿಯಾದ ಪ್ರತಿವಾದಿಯ ವಿರುದ್ದ ಮುಧೋಳ ನ್ಯಾಯಾಲಯದಲ್ಲಿ ಅ.ದಾ.ನಂ.349/1999 ನೇದ್ದನ್ನು ದಾಖಲಿಸಿ ದಾವಾ ಆಸ್ತಿಯ ತನ್ನ ಸ್ವಾಧೀನತೆಗೆ ಪ್ರತಿವಾದಿ ಯಾವುದೇ ರೀತಿಯ ತೊಂದರೆ ಕೊಡಬಾದರದು ಎಂದು ಪ್ರಾರ್ಥಿಸಿದ್ದನು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಅಂಬಾದಾಸ ಇವರು ನಾನೇ ಯಾರದೆ ಒತ್ತಾಯ ಇಲ್ಲದೆ ಮನೆ ಬಿಟ್ಟು ಹೋಗಿರುತ್ತೇನೆ ಎಂದು ಒಪ್ಪಿಕೊಂಡಿದ್ದರಿಂದ ಸದರಿ ದಾವೆ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅ.ದಾ.ನಂ.349/1999 ನೇದ್ದ ರಲ್ಲಿ ಮಾಡಿದ ಆದೇಶವನ್ನು ಪ್ರಶ್ನಿಸಿ ಅಂಬಾದಾಸ ಇವನು ಮೇಲ್ಮನವಿ ದಾಖಿಸಿದ್ದು ಮತ್ತು ಸದರಿ ಮೇಲ್ಮನವಿ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಇ.ಪಿ ನಂ.9/2010 ರಲ್ಲಿ ನ್ಯಾಯಾಲಯವು ಮಾಡಿದ ಆದೇಶ ಚಾಲ್ತಿಯಲ್ಲಿರುವಾಗ ದಾವಾ ಆಸ್ತಿಗೆ ಸಂಬಂದಿಸಿದ ನಾವು ಒಂದು ಖೊಟ್ಟಿ ಖರೀದಿ ಪತ್ರವನ್ನು ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಅಂಬಾದಾಸ ಮತ್ತು ಅವನ ಹೆಂಡತಿಯಾದ ಪ್ರತಿವಾದಿ ಕೂಡಿಕೊಂಡು ಅವರ ಮದುವೆಯಾದ ಸಮಯದಿಂದ ದಾವಾ ಆಸ್ತಿಯ ಮನೆಯಲ್ಲಿಯೇ ಇರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 1993 ನೇ ಸಾಲಿಗಿಂತ ಮುಂಚೆ ಅಂಬಾದಾಸ ಇವನು ತನ್ನ ಹೆಂಡತಿಯಾದ ಪ್ರತಿವಾದಿಯನ್ನು ನಿರ್ಲಕ್ಷಿಸಿ ತಾನೇ ಮನೆ ಬಿಟ್ಟು ಹೋದನು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲೆ ನಮೂದಿಸಿದ ದಾವೆಗಳ ಮತ್ತು ಇ.ಪಿ ಪ್ರಕರಣ ಮತ್ತು ಅವುಗಳಲ್ಲಿ ಆದ ಆದೇಶಗಳ ಬಗ್ಗೆ ನನಗೆ, ನನ್ನ ತಂದೆಗೆ ಮತ್ತು ನನ್ನ ತಾಯಿಗೆ ಗೊತ್ತಿದ್ದರೂ ಸಹಿತ ನನಗೆ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾವು ಖೋಟ್ಟಿ ಖರೀದಿ ಪತ್ರದ ಮೇಲೆ ನಮ್ಮ ಹೆಸರುಗಳನ್ನು ದಾವಾ ಆಸ್ತಿಗೆ ಸಂಬಂದಿಸಿದ ದಾಖಲಾತಿಗಳನ್ನು ನಮೂದು ಮಾಡಿಕೊಳ್ಳುವಾಗ ಪ್ರತಿವಾದಿ ತಕರಾರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಖರೀದಿ ಪತ್ರ ಖೋಟ್ಟಿ ಇರುವುದಿಲ್ಲ ಆದರೆ ನಮ್ಮ ಹೆಸರುಗಳನ್ನು ದಾವಾ ಆಸ್ತಿಗೆ ದಾಖಲು ಮಾಡಿಕೊಡುವ ಸಮಯದಲ್ಲಿ ಪ್ರತಿವಾದಿ ತಕರಾರು ಮಾಡಿದ್ದಳು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಮನೆಯಲ್ಲಿ ಪ್ರತಿವಾದಿಗೆ ಕಾನೂನು ಬದ್ಧವಾಗಿ ಶಾಶ್ವತವಾಗಿ ದಾವಾ ಮನೆಯಲ್ಲಿ ಇರುವ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನಾವು ದಾವಾ ಮನೆಯನ್ನು ಖರೀದಿ ಮಾಡಿದ ಮೇಲೆ ಪ್ರತಿವಾದಿ 03 ತಿಂಗಳು ಖಾಲಿ ಮಾಡಲು

ಸಮಯ ಕೇಳಿದ್ದಳು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದಿಸಿದಂತೆ ನಾವು ಮಾಡಿಕೊಂಡ ಖರೀದಿ ಪತ್ರ ಪ್ರತಿವಾದಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಂಬಾದಾಸ ಇವನು ಪ್ರತಿವಾದಿಗೆ ಯಾವುದೇ ಜೀವನಾಂಶ ಕೊಡಬಾರದು ಎಂದು ಮತ್ತು ಪ್ರತಿವಾದಿ ದಾವಾ ಆಸ್ತಿಯ ಮನೆಯಲ್ಲಿ ಇರಬಾರದು ಎಂಬ ಉದ್ದೇಶದಿಂದ ಒಂದು ಖೊಟ್ಟಿ ಖರೀದಿ ಪತ್ರವನ್ನು ನಮ್ಮ ಹೆಸರಿನಲ್ಲಿ ಮಾಡಿಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಬಿಟ್ಟು ಪ್ರತಿವಾದಿಗೆ ವಾಸಿಸಲು ಬೇರೆ ಯಾವುದೇ ಮನೆ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಅಂಬಾದಾಸರವರ ಮಾತುಕೇಳಿಕೊಂಡು ಈ ಒಂದು ಸುಳ್ಳು ದಾವೆಯನ್ನು ದಾಖಲಿಸಿ ಈಗ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

SD/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

**ಸಾಕ್ಷಿಯ ಸಹಿಃ**